789 Sri Bellubbi Sangappa Kallappa (Basavana-bagewadi) : Hon'ble Minister for Animal Husbandry kindly answer to the below question?

a) Whether shortage of Veterinary Hospital at Basavanabagevadi constituency of Bijapur District, staff at the exisiting Mobile Veterinary Dispensary, has it come to the notice of the Government;

b) If so, what action has been taken by the Government?

Sri Revunaik Belamagi (Minister for Animal Husbandry):

a) As per 2003 Cattle Census, there are 75150 Cattle Hnits in Basavanabagevadi Taluk. As per the recommendation of National Commission on Agriculture, there should be one veterinary institution for every 5000 Cattle Units. Accordingly Basavana bagevadi Taluk requires 15 Veterinary Institutions but has got 22 Veterinary Institution, which is excess by 7 Institutions. Hence, there is no need to open new Veterinary Institution in that constituency. The scarcity of staff in Mobile Veterinary Dispensary at Basavanabagewadi taluk has not come to the notice of Government.

b) This will be examined and take necessary action as per rules.

1151 ಶ್ರೀ ಬಚ್ಚೇಗೌಡ ಕೆ.ಪಿ. : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪಶುಸಂಗೋಪನಾ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಈ ಕಾಲೇಜುಗಳನ್ನು ಯಾವ ಯಾವ ವರ್ಷ ಮಂಜೂರು ಮಾಡಲಾಗಿದೆ ಹಾಗೂ ಕಳೆದ ಮೂರು ವರ್ಷಗಳಿಂದ ಮಂಜೂರಾದ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಇ) ಸರ್ಕಾರಿ ಪಶುಸಂಗೋಪನಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡಲು ಅವಕಾಶವಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಕಾಲೇಜುವಾರು ಮಾಹಿತಿ ನೀಡುವುದು);

ಈ) ಈಗಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ಉ) ಹಾಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು; ವಿಷಯವಾರು ಮಾಹಿತಿ ನೀಡುವುದು; ಉಪನ್ಯಾಸಕರ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು ನಾಲ್ಕು ಸರ್ಕಾರಿ ಪಶುವೈದ್ಯಕೀಯ ಮಹಾ ವಿದ್ಯಾನಿಲಯಗಳಿದ್ದು ಅವುಗಳು ಬೆಂಗಳೂರು, ಬೀದರ್, ಶಿವಮೊಗ್ಗ ಹಾಗೂ ಹಾಸನದಲ್ಲಿರುತ್ತವೆ.

ಆ) ರಾಜ್ಯದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯಗಳು ಸ್ಥಾಪನೆಗೊಂಡ ವರ್ಷ ಕೆಳಗಿನಂತಿದೆ:

ಬೆಂಗಳೂರು–1958, ಬೀದರ್–1984, ಶಿವಮೊಗ್ಗ–2006 ಹಾಗೂ ಹಾಸನ–2007.

ಕಳೆದ ಮೂರು ವರ್ಷಗಳಲ್ಲಿ 2 ಸರ್ಕಾರಿ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ. ಅವುಗಳು ಯಾವುವೆಂದರೆ ಶಿವಮೊಗ್ಗ ಮತ್ತು ಹಾಸನ ಪಶುವೈದ್ಯಕೀಯ ಕಾಲೇಜುಗಳು.

ಇ) ಅವಕಾಶವಿರುವ ವಿದ್ಯಾರ್ಥಿಗಳ ಸಂಖ್ಯೆ 60. ಕರ್ನಾಟಕದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ವರ್ಷ 2009–10ನೇ ಸಾಲಿಗೆ ಒಟ್ಟು 196 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಇರುತ್ತದೆ. ಮಹಾವಿದ್ಯಾಲಯವಾರು ಪ್ರವೇಶ ಅವಕಾಶ ಈ ಕೆಳಗಿನಂತಿದೆ:

1) ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು–60

2) ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್–51

3) ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ–45

4) ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ–40

ವಿದ್ಯಾರ್ಥಿಗಳ ಸಂಖ್ಯೆ 60 ಮುಟ್ಟುವವರೆವಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಮತ್ತು ಹಾಸನಗಳಿಗೆ ಪ್ರತಿ ವರ್ಷ 5 ವಿದ್ಯಾರ್ಥಿಗಳ ಪ್ರವೇಶ ಹೆಚ್ಚಳವಿರುತ್ತದೆ.

ಈ) ಇಲ್ಲ. ಇದಕ್ಕೆ ಮುಖ್ಯ ಕಾರಣ ಶಿವಮೊಗ್ಗ ಮತ್ತು ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯಗಳನ್ನು ನೂತನವಾಗಿ ಸ್ಥಾಪಿಸಿದ್ದು ಅವಶ್ಯಕತೆಯಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಇತ್ತೀಚೆಗಷ್ಟೆ ವಿಶ್ವವಿದ್ಯಾಲಯವು ವ್ಯವಸ್ಥಾಪಕ ಮಂಡಳಿ ಅನುಮೋದನೆ ಪಡೆದು ಸೃಷ್ಟಿಸಿದೆ. ಆದಕಾರಣ, ಸದರಿ ಹುದ್ದೆಗಳನ್ನು ಶೀಘ್ರವಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳಲ್ಲಿ ಲಭ್ಯವಿರುವ ಹುದ್ದೆಗಳ ವಿವರ ಕೆಳಗಿನಂತಿದೆ :

ವಿಭಾಗ	ಪಶುವೈದ್ಯಕೀಯ ವಿಭಾಗ			ಹೈನುಗಾರಿಕಾ ವಿಭಾಗ			ಮೀನುಗಾರಿಕಾ ವಿಭಾಗ		
ಹುದ್ದೆ	ಒಟ್ಟು	ಭರ್ತಿ	ಖಾಲಿ	ಒಟ್ಟು	ಭರ್ತಿ	ಖಾಲಿ	ಒಟ್ಟು	ಭರ್ತಿ	ಖಾಲಿ
ಪ್ರಾಧ್ಯಾಪಕರು	31	08	23	04	01	03	07	00	07
ಸಹ ಪ್ರಾಧ್ಯಾಪಕರು	50	10	40	08	04	04	15	01	14
ಸಹಾಯಕ ಪ್ರಾಧ್ಯಾಪಕರು	114	64	50	23	11	12	38	15	23
ಒಟ್ಟು	**195**	**82**	**113**	**35**	**16**	**19**	**60**	**16**	**44**

ಮೇಲಿನ ಹುದ್ದೆಗಳನ್ನು ಹೊರತುಪಡಿಸಿ ಪಶುವೈದ್ಯಕೀಯ ವಿಭಾಗದಲ್ಲಿ 21 ಜನ ಮತ್ತು ಮೀನುಗಾರಿಕಾ ವಿಭಾಗದಲ್ಲಿ 16 ಜನ ಬೋಧಕರು ಇನ್ಸ್‌ಟ್ರಕ್ಟರ್ (Instructor) ಕೆಲಸ ನಿರ್ವಹಿಸುತ್ತಿದ್ದಾರೆ. ವಿಶ್ವ ವಿದ್ಯಾಲಯವು ವ್ಯವಸ್ಥಾಪಕ ಮಂಡಳಿ ಅನುಮೋದನೆ ಪಡೆದು ಹೊಸ ಮಹಾವಿದ್ಯಾಲಯಗಳಾದ ಹಾಸನ ಮತ್ತು ಶಿವಮೊಗ್ಗಕ್ಕೆ ಬೇಕಾದ ಹುದ್ದೆಗಳನ್ನು ಸೃಷ್ಟಿಸಿದೆ. ಸದರಿ ಹುದ್ದೆಗಳನ್ನು ತ್ವರಿತವಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

1151 Sri Bachegowda K.P. : Hon'ble Minister for Animal Husandry kindly answer to the below question?

a) How many Government Veterinary Colleges are there in the State? (District wise information)

b) When these Government Colleges started functioning and how many colleges have been sanctioned during the last three years?

c) What is the intake capacity of these Government Veterinary Colleges (Give College wise information)?

d) Whether sufficient teachers are available as per the student strength, if not provide reasons?

e) Give faculty wise vacancy of teaching staff. What measures Government has taken to fill up the vacancies?

Sri Revunayak Belamagi (Minister for Animal Husbandry) :

a) There are four Veterinary Colleges in the State and they are situated at Bangalore, Bidar, Shivamoga and Hassan.

b) The year of establishment of four Government Colleges functioning in the State are as follows;

Bangalore-1958, Bidar-1984, Shivmoga-2006 and Hassan-2007.

During the last three years, two Government Colleges have been started at Shimoga & Hassan.

c) The Total intake capacity of all the Veterinary Colleges in the State is 196 during the academic year 2009-10. The college wise intake capacity are as follows;

Veterinary College, Bangalore - 60
Veterinary College, Bidar - 51
Veterinary College, Shivamoga - 45
Veterinary College, Hassan - 40

The intake to Veterinary College, Shimoga and Hassan increases by 5 seats annually till the it reaches 60.

d) No. Since the colleges at Shimoga and Hassan and Teaching and Non-Teaching staff created recently. Action will be taken to fill up newly created posts early.

e) The vacancy position of teaching staff in different faculties of the University are given below.

Faculty	Veterinary Science			Dairy Science			Fisheries Science		
Posts	Total	Filled	Vacant	Total	Filled	Vacant	Total	Filled	Vacant
Prof.	31	08	23	04	01	03	07	00	07
Ass Prof.	50	10	40	08	04	04	15	01	14
Asst Prof	114	64	50	23	11	12	38	15	23
Total	**195**	**82**	**113**	**35**	**16**	**19**	**60**	**16**	**44**

In addition to above there are 21 Teachers in Veterinary faculty and 16 Teachers in Fisheries faculty who are holding original post of Instructors. The University has created Teaching and Non-Teaching posts to Veterinary College Shimoga and Hassan, land action will be taken to fill up these posts early.

1163 ಶ್ರೀ ಬಾಲಕೃಷ್ಣ ಹೆಚ್.ಪಿ. : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪಶುಸಂಗೋಪನಾ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);